75 ವರ್ಷ

# ಕನ್ನಡದ ಭಗವದ್ಗೀತೆಗೆ

■ ಎಸ್. ಸೂರ್ಯಪ್ರಕಾಶ ಪಂಡಿತ್






ಡಿವಿಜಿ ಎಂದ ಕೂಡಲೇ ಮಂಕುತಿಮ್ಮನ ಕಗ್ಗ, ಮಂಕುತಿಮ್ಮನ ಕಗ್ಗ ಎಂದ ಕೂಡಲೇ ಡಿವಿಜಿ – ಎನ್ನುವಷ್ಟರ ಮಟ್ಟಿಗೆ ಕಗ್ಗಕ್ಕೂ ಗುಂಡಪ್ಪನವರಿಗೂ ಅವಿನಾಭಾವ ಸಂಬಂಧ ಏರ್ಪಟ್ಟಿದೆ. ಇದೇನೂ ಆಕಸ್ಮಿಕ ಬಾಂಧವ್ಯವಲ್ಲ. ನಮ್ಮ ಜೀವನಕ್ಕೆ ವಿಶಾಲವಾದ ಆದರ್ಶದ ಭೂಮಿಕೆಯನ್ನೂ ಸಾಂತ್ವನವನ್ನೂ ಕೊಡುವಂಥ ವಿಶಿಷ್ಟ ಕೃತಿಯೇ ಮಂಕುತಿಮ್ಮನ ಕಗ್ಗ. ಇಲ್ಲಿಯ 'ಉಪದೇಶ'ಗಳು 'ಪುಸ್ತಕದ ಬದನೆ'ಯಂಥಲ್ಲ; ಇಲ್ಲಿಯ ಎಷ್ಟೋ ವಿಷಯಗಳಿಗೂ ಡಿವಿಜಿಯವರ ಜೀವನಕ್ಕೂ ನೇರ ನಂಟಿರುವುದು ಸ್ಪಷ್ಟ. ಹೀಗಾಗಿ ಡಿವಿಜಿಯವರನ್ನು ಕಗ್ಗದಲ್ಲಿಯೂ, ಕಗ್ಗದಲ್ಲಿ ಡಿವಿಜಿಯವರನ್ನೂ ಜನರು ಸಮೀಕರಿಸಿಕೊಂಡಿರುವುದರಲ್ಲಿ ಅಸಹಜವೇನೂ ಇಲ್ಲ ಎನಿಸುತ್ತದೆ. ಮಾತ್ರವಲ್ಲ, ಡಿವಿಜಿಯವರ ಕೃತಿಗಳಲ್ಲಿ ಅತ್ಯಂತ ಜನಪ್ರಿಯವಾದುದೆಂದರೂ ಮಂಕುತಿಮ್ಮನ ಕಗ್ಗವೇ. ಅಷ್ಟೇಕೆ, ಇಂದಿಗೂ ಅತ್ಯಂತ ಬೇಡಿಕೆಯಲ್ಲಿರುವ ಕನ್ನಡದ ಕೆಲವೇ ಪುಸ್ತಕಗಳಲ್ಲಿ ಅದು ಪ್ರಮುಖ ಸ್ಥಾನವನ್ನು ಅಲಂಕರಿಸಿದೆ. ಕಗ್ಗದ ಲಕ್ಷಾಂತರ ಪ್ರತಿಗಳು ಮಾರಾಟವಾಗಿವೆ; ಅದರ ಬಗ್ಗೆ ನಾಲ್ಕಾರು ವಿವರಣಗ್ರಂಥಗಳೂ ಪ್ರಕಟವಾಗಿವೆ; ಸಿ.ಡಿ.–ಕ್ಯಾಸೆಟ್‌ಗಳೂ ಬಂದಿವೆ. ಕಗ್ಗವನ್ನು ಕುರಿತ ಈ ಕೃತಿಗಳಿಗೂ ಬೇಡಿಕೆ ತಗ್ಗಿಲ್ಲ. ಪ್ರತಿ ದಿನವೂ ಒಂದಲ್ಲ ಒಂದು ಮಾಧ್ಯಮದಲ್ಲಿ ಕಗ್ಗವನ್ನು ಕುರಿತು ಯಾವುದಾದರೊಂದು ಕಾರ್ಯಕ್ರಮ ನಡೆಯುತ್ತಲೇ ಇರುತ್ತದೆ. ಹಲವರು ಕಗ್ಗದ ಬಗ್ಗೆ ಉಪನ್ಯಾಸಗಳನ್ನು ಮಾಡಿ ಹೆಸರನ್ನು ಸಂಪಾದಿಸಿದವರೂ ಇದ್ದಾರೆ. ಸಾವಿರಾರು ಜನರಿಗೆ ಅದು ನಿತ್ಯಪಾರಾಯಣಗ್ರಂಥವಾಗಿಯೂ ಒದಗಿದೆ.

ಕಗ್ಗಕ್ಕೆ ದಕ್ಕಿರುವ ಈ ಅಪಾರ ಮನ್ನಣೆ ಇತ್ತೀಚಿನ ಬೆಳವಣಿಗೆಯೇನಲ್ಲ. ಕಗ್ಗದ ಮೊದಲ ಆವೃತ್ತಿಯು ಮುಗಿದು ಪುನರ್ಮುದ್ರಣವಾದಾಗ ಡಿವಿಜಿಯವರು ಅದರಲ್ಲಿ ಒಂದಷ್ಟು ಸಣ್ಣಪುಟ್ಟ ಸುಧಾರಣೆಗಳನ್ನು ಮಾಡಿದ್ದರು. ಆಗ ಕೆಲವರು ಆ ಬದಲಾವಣೆಗಳ ಬಗ್ಗೆ ಬೇಸರ ವ್ಯಕ್ತಪಡಿಸಿದರಂತೆ. ಅದಕ್ಕೆ ಆ ಸಹೃದಯರು ಡಿವಿಜಿಯವರಿಗೆ ಕೊಟ್ಟ ಕಾರಣ: 'ನೀವು ಮೊದಲು ಬರೆದಿದ್ದನ್ನು ನಾವೆಲ್ಲ ಎಷ್ಟು ಕಷ್ಟಪಟ್ಟು ಬೈಹಾರ್ಟ್ ಮಾಡಿದ್ದೆವು! ಈಗ ಮತ್ತೆ ಅಭ್ಯಾಸ ಮಾಡಬೇಕಾಗಿದೆಯಲ್ಲ?' ಕಗ್ಗದ ಪದ್ಯಗಳನ್ನು ಕಂಠಸ್ಥ ಮಾಡಿಕೊಂಡಿರುವವರು ಸಾವಿರಾರು ಸಂಖ್ಯೆಯಲ್ಲಿ ಕಾಣಸಿಗುತ್ತಾರೆ; ನಿತ್ಯದ ಯಾವುದೋ ಸಂದರ್ಭದಲ್ಲಿ ಕಗ್ಗದ ಮಾತುಗಳನ್ನು ಸಹಜವಾಗಿಯೇ ಸೂಕ್ತಿಗಳಂತೆ ಬಳಸುವವರ ಸಂಖ್ಯೆಯೂ ಕಡಿಮೆಯೇನಿಲ್ಲ. ಮಂಕುತಿಮ್ಮನ ಕಗ್ಗ ಮೊದಲು ಪ್ರಕಟವಾದದ್ದು 1943ರಲ್ಲಿ. 1950ರ ಸುಮಾರಿನಲ್ಲಿ ಮಂತ್ರಿಗಳೊಬ್ಬರು 'ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ' ಎಂಬ ಕಗ್ಗದ ತುಣುಕೊಂದನ್ನು ಹೇಳಿ, 'ಇದು ಸರ್ವಜ್ಞನ ವಚನ' ಎಂದರಂತೆ! ಎಂದರೆ ಪ್ರಕಟವಾದ ಕೆಲವೇ ವರ್ಷಗಳಲ್ಲಿ ಕಗ್ಗ ಹೇಗೆ ಜನರಲ್ಲಿ ಒಂದಾಗಿ ಬೆರೆತುಹೋಯಿತು ಎನ್ನುವುದಕ್ಕೆ ಇದೊಂದು ಒಳ್ಳೆಯ ನಿದರ್ಶನ.

'ಮಂಕುತಿಮ್ಮನ ಕಗ್ಗ'ವನ್ನು 'ಕನ್ನಡದ ಭಗವದ್ಗೀತೆ' ಎಂದೂ ಕೆಲವರು ಕರೆದಿರುವುದುಂಟು. ಜೀವನದ ಎಲ್ಲ ಸಂದರ್ಭಗಳಲ್ಲೂ ನಮ್ಮನ್ನು ಎತ್ತಿಹಿಡಿಯಬಲ್ಲಂಥ ವಿವೇಕ ಭಗವದ್ಗೀತೆಯಲ್ಲಿ ಧಾರಾಳವಾಗಿರುವಂತೆ ಮಂಕುತಿಮ್ಮನ ಕಗ್ಗದಲ್ಲೂ ಇದೆ ಎನ್ನುವ ಕಾರಣಕ್ಕೆ ಈ ಸಮೀಕರಣ. ಇಲ್ಲಿ ಇನ್ನೊಂದು ಸ್ವಾರಸ್ಯವನ್ನೂ ಗಮನಿಸಬಹುದು. ಕಗ್ಗ 1943ರಲ್ಲಿ ಪ್ರಕಟವಾಯಿತಷ್ಟೆ. ಆಗ ಎರಡನೇ ಪ್ರಪಂಚ ಮಹಾಯುದ್ಧ ನಡೆಯುತ್ತಿತ್ತು.